# ಪಾತ್ರ ಕಲಿಕೆಯ ಪಾಠಶಾಲೆ



**ಪ್ರಜ್ವಲ್ ರವಿ**
ಉದಯದ 'ಅಣ್ಣ ತಂಗಿ'ಯ ಇಂದ್ರ

◆ **ಅಣ್ಣ–ತಂಗಿ ಪ್ರೀತಿಯ ಕಥೆ ಹಳತು ಎಂದು ಅನಿಸುವುದಿಲ್ಲವೇ?**

ಮನುಷ್ಯನ ಬದುಕಿಗೆ ಸಿಕ್ಕ ವೇಗ ಕೌಟುಂಬಿಕ ಸಂಬಂಧಗಳಲ್ಲೂ ಪಲ್ಲಟವನ್ನು ಉಂಟುಮಾಡಿದೆ. ಮೊದಲಿದ್ದ ಬಾಂಧವ್ಯದ ಬೆಸುಗೆ ಸಡಿಲಗೊಂಡಿವೆ. ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಕುಳಿತು ಮಾತನಾಡುವ ಸಂದರ್ಭಗಳೇ ಕಡಿಮೆ ಆಗಿವೆ. ಸಂಬಂಧ ಮತ್ತು ಪ್ರೀತಿಯ ಹಿರಿಮೆಯನ್ನು ತೋರಿಸುವ ಪ್ರಯತ್ನ ಈ ಧಾರಾವಾಹಿ. ಇದೇ ರೀತಿ ಅನೇಕ ಕಥೆಗಳು ಬಂದಿದ್ದರೂ ಮರೆಯಾಗುತ್ತಿರುವ ಬಾಂಧವ್ಯವನ್ನು ಗಟ್ಟಿಗೊಳಿಸಲು ಇದು ಪ್ರೇರಣೆ ಆಗಬಹುದು ಎನ್ನುವುದು ಆಶಯ. ಅಣ್ಣ, ತಂಗಿಯ ಬಗ್ಗೆ ತುಂಬ ಕಾಳಜಿಯನ್ನು ತೆಗೆದುಕೊಳ್ಳುತ್ತಾನೆ.

◆ **ಜ್ಯೋತಿಷ್ಯ ಮೌಢ್ಯದ ಪೋಷಣೆ ಮಾಡಿದಂತೆ ಆಗುತ್ತದೆ ಅಲ್ಲವೇ?**

ಸಾಕಷ್ಟು ಜನ ಜ್ಯೋತಿಷ್ಯವನ್ನು ನಂಬುತ್ತಾರೆ. ನಿತ್ಯವೂ ಅದನ್ನು ಆಧರಿಸಿಯೇ ನಡೆದುಕೊಳ್ಳುತ್ತಾರೆ. ಜ್ಯೋತಿಷ್ಯದ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲ. ವೈಯಕ್ತಿಕವಾಗಿ ಈ ವಿಷಯದಲ್ಲಿ ಫಿಫ್ಟಿ–ಫಿಫ್ಟಿ. ಜನರ ನಂಬಿಕೆಯ ಮೂಲವನ್ನು ಅನಾವರಣ ಮಾಡಲಾಗುತ್ತಿದೆ. ಜನರ ನಂಬಿಕೆ ನಡವಳಿಕೆಯ ಜೊತೆ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಬಿಂಬಿಸಲಾಗುತ್ತಿದೆ. ಒಟ್ಟಾರೆ 'ಅಣ್ಣ ತಂಗಿ' ತುಂಬ ಚೆನ್ನಾಗಿ ಬರ್ತಾ ಇದೆ. ಇಂದು ಹಳ್ಳಿಗಳೂ ತಮ್ಮ ಮೂಲ ಸೊಗಡಿನಿಂದ ದೂರವಾಗುತ್ತಿವೆ. ಇಂತಹ ಸಂದರ್ಭದಲ್ಲಿ ಇದು ಆಪ್ತ ಎಂದೆನಿಸುತ್ತದೆ.

◆ **ಜನರ ಜೀವನಕ್ಕೆ ಅನ್ವಯುಗುವಂತೆ ಧಾರಾವಾಹಿ ಕಥೆಯನ್ನು ತರಬಹುದೇ?**

ನಾನು ಜನರಿಗೆ ಹತ್ತಿರವಾಗುವಂತಹ ಕಥೆಗಳನ್ನೇ ಮಾಡುತ್ತಿದ್ದೇನೆ. ಜನರಿಗೆ ಬೇಡವಾದ ಕಥೆಗಳನ್ನೆಲ್ಲ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಜನ ಅವುಗಳನ್ನು ನೋಡುವುದಿಲ್ಲ. ಜನರ ನಿತ್ಯದ ಜೀವನದಲ್ಲಿ ನಡೆಯುವ ಘಟನೆಗಳೇ ಇವತ್ತಿನ ಬಹುತೇಕ ಕಥೆಗಳಲ್ಲಿ ಬರುತ್ತಿವೆ. ನಾವು ಇದರಿಂದ ತೊಂದರೆ ಸಿಲುಕಿದರೆ ಅಲ್ಲಿ ಪರಿಹಾರವನ್ನೂ ಸೂಚಿಸುತ್ತೇವೆ. ಸಮಸ್ಯೆಗೆ ಕಾರಣ ಮತ್ತು ಪರಿಹಾರವೂ ಅಲ್ಲಿ ಇರುತ್ತದೆ.

◆ **ಇದ್ದಕ್ಕಿದ್ದಂತೆ ಕಥೆ ಉಲ್ಟಾ ಆಗುತ್ತದೆ ಏಕೆ ಹೀಗೆ?**

ನಮ್ಮ ಧಾರಾವಾಹಿ ಪಾಯಿಂಟ್ ಟು ಪಾಯಿಂಟ್ ಇದೆ. ಇವತ್ತು ಏನಾದರೂ ಸಮಸ್ಯೆ ಎದುರಾದರೆ ಮರುದಿನವೇ ಅದಕ್ಕೆ ಪರಿಹಾರವನ್ನೂ ಸೂಚಿಸುತ್ತದೆ. ಇದುವರೆಗೂ ಕಥೆಯನ್ನು ಅನಗತ್ಯ ಲಂಬಿಸಿಲ್ಲ. ಒಂದು ಸಮಸ್ಯೆಯಿಂದ ಮತ್ತೊಂದು ಸಮಸ್ಯೆಯನ್ನು ಹುಟ್ಟುಹಾಕುವುದಿಲ್ಲ. ಯಾವುದೇ ಸಮಸ್ಯೆಗೆ ಪರಿಹಾರ ಇರುತ್ತದೆ. ಅದನ್ನು ಕಂಡುಹಿಡಿಯುವ ಪ್ರಯತ್ನ ಮಾಡುತ್ತೇವೆ. ಹಾಗಾಗಿ ಇಂದು ಪ್ರತಿಪಾದಿಸಿದ ನೀತಿ ನಾಳೆಯೂ ಬದಲಾಗುವುದಿಲ್ಲ. ಇದು ಜನರಿಗೆ ಹತ್ತಿರವಾಗುತ್ತದೆ ಎಂದು ನನಗೆ ಅನಿಸುತ್ತದೆ.

◆ **ನಿಮ್ಮ ಸಿನಿಮಾ ಕನಸಿನ ಬಗ್ಗೆ ಹೇಳಿ.**

'ಚೌಕಟ್ಟು' ಮತ್ತು 'ವಿಕ್ರಮ ಚಿತ್ರ' ಎಂಬ ಎರಡು ಸಿನಿಮಾ ಮಾಡಿದ್ದೇನೆ. ಕೊರೊನಾ ಕಾರಣಕ್ಕೆ ಇನ್ನೂ ಬಿಡುಗಡೆಯ ಭಾಗ್ಯ ಅವುಗಳಿಗೆ ಸಿಕ್ಕಿಲ್ಲ. 'ಚೌಕಟ್ಟು'ನಲ್ಲಿ ನಾಟಿ ಹುಡುಗ. ಯಾವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ. ಹಣಕಾಸಿನ ದೃಷ್ಟಿಯಲ್ಲಿ ಅನುಕೂಲಸ್ಥ ಕುಟುಂಬ. 'ವಿಕ್ರಮ ಚಿತ್ರ'ದಲ್ಲಿ ಪ್ರಮುಖವಾಗಿ ಮೂರು ಪಾತ್ರ ಬರುತ್ತವೆ. ಅದರಲ್ಲಿ ಮಾನಸಿಕ ತೊಂದರೆಯನ್ನು ಎದುರಿಸುವ ಪಾತ್ರ ನನ್ನದು. ಇಂದ್ರದಂತಹ ಪಾತ್ರ ಮಾಡಲು ಇಷ್ಟ. ಇದರಿಂದ ಹಲವು ಲಾಭಗಳಿವೆ. ಕಲಿಯಲು ಹೆಚ್ಚು ಅವಕಾಶ ಇದೆ. ಪಾತ್ರವೊಂದು ಕಲಿಕೆಯ ಪಾಠಶಾಲೆಯಂತೆ. ಇದರ ದೇಹ ಭಾಷೆಯೇ ಭಿನ್ನ.

◆ **ನಿಮ್ಮ ಬಗ್ಗೆ ನೀವು ಹೇಳುವುದಾದರೆ.**

ಓದುವ ಸ್ವಭಾವ. ಬಿಕಾಂನಲ್ಲಿ ಬೆಂಗಳೂರು ವಿವಿಯಲ್ಲೇ ಮೊದಲಿಗನಾಗಿ ಪಾಸಾಗಿದ್ದೆ. ನಾನು ಐ.ಎ.ಎಸ್. ಮಾಡಬೇಕು ಎನ್ನುವ ಬಯಕೆಯನ್ನು ಹೆತ್ತವರು ಹೊತ್ತಿದ್ದರು. ಅವರ ಆಸೆಯಂತೆ ದೆಹಲಿಗೆ ಹೋಗಿ ತರಬೇತಿ ಪಡೆದೆ. ಮೇನ್ಸ್ ಪರೀಕ್ಷೆಯಲ್ಲಿ ವಿಫಲನಾದೆ. ಮತ್ತೊಂದು ವರ್ಷ ಕುಳಿತು ಓದುವ ವ್ಯವಧಾನ ಇರಲಿಲ್ಲ. ಅಷ್ಟರಲ್ಲಾಗಲೇ ನಟನೆಗೆ ಅವಕಾಶಗಳು ಬಂದಿದ್ದವು. ನನಗೆ ಗೊತ್ತಿರುವ ಕೆಲವರು ಸಂದರ್ಶನಕ್ಕೂ ಹಾಜರಾಗಿ ಹುದ್ದೆಯನ್ನು ಪಡೆಯುವಲ್ಲಿ ಸೋತಿದ್ದರು. ಹೀಗಿರುವಾಗ ಸ್ವಂತ ನಾನೇ ಬದುಕು ಕಟ್ಟಿಕೊಳ್ಳಲು ನಟನೆಗೆ ಬಂದೆ.

'ಬಾರ್ಬರಿಕಾ' ಎಂಬ ಪೌರಾಣಿಕ ಕಥೆಯ ಕಿರುಚಿತ್ರದ ಮೂಲಕ ಅಭಿನಯ ಆರಂಭಿಸಿದೆ. ಮೊದಲ ಧಾರಾವಾಹಿ 'ಶಾಂತಂ ಪಾಪಂ'ನಲ್ಲಿ ಪುಟ್ಟ ಪಾತ್ರವನ್ನು ನಿರ್ವಹಣೆ ಮಾಡಿದ್ದೆ. 'ಅಮೃತವರ್ಷಿಣಿ'ಯಲ್ಲಿ ಮೊದಲಬಾರಿಗೆ ನಾಯಕನಾಗುವ ಅದೃಷ್ಟ ಸಿಕ್ಕಿತು. ತೆಲುಗಿನಲ್ಲೂ ಎರಡು ಧಾರಾವಾಹಿಗಳಲ್ಲಿ ನಟಿಸಿದ್ದೇನೆ. ಈಗ ಇಂದ್ರ ಪಾತ್ರ ಮಾಡುತ್ತಿದ್ದೇನೆ. ಇದು ರಿಪ್ಲೇಸ್ ಪಾತ್ರ. ಬಂದ ಅವಕಾಶದ ಬಗ್ಗೆ ಯೋಚಿಸಿದಾಗ ಮಾಡಬಹುದು ಎಂದು ಅನ್ನಿಸಿ ಒಪ್ಪಿದೆ. ಇದು ಸವಾಲಿನ ಪಾತ್ರ. ಒಮ್ಮೆ ವಿಲನ್ ಆಗಿರುತ್ತೇನೆ. ತುಳಸಿ ಹಿಂದೆ ಬಿದ್ದು ಕಾಮಿಡಿ ಮಾಡುತ್ತೇನೆ. ಮತ್ತೊಮ್ಮೆ ತಾಯಿ ಜೊತೆಗಿನ ವಾತ್ಸಲ್ಯವನ್ನು ಪ್ರಕಟಿಸುತ್ತೇನೆ. ಕೋಪದ ಛಾಯೆ ಕೂಡ ಬರುತ್ತದೆ. ಒಮ್ಮೆ ಆತ್ಮಹತ್ಯೆಗೆ ಮುಂದಾಗುವ ಭಾವುಕ ಕ್ಷಣವೂ ಎದುರಾಗುತ್ತದೆ. ನಾನು ನಿರ್ವಹಿಸಿದ ಬೇರೆ ಪಾತ್ರಗಳಿಗೆ ಹೋಲಿಸಿದರೆ ಇದರಲ್ಲಿ ತುಂಬ ವ್ಯಕ್ತಿತ್ವಗಳ ಛಾಯೆ ಪ್ರತಿಫಲಿಸುತ್ತದೆ.

■ **ರಾಘವೇಂದ್ರ ಕೆ.**